2. ಬಸವಕಲ್ಯಾಣ ವಿಧಾನಸಭಾ ಮತಕ್ಷೇತ್ರದಲ್ಲಿ ರಾಜ್ಯ ಹೆದ್ದಾರಿಯ ಒಟ್ಟು ಉದ್ದ 39 ಕಿ.ಮಿ. ಹಾಗೂ ಜಿಲ್ಲಾ ಮುಖ್ಯರಸ್ತೆಗಳ ಒಟ್ಟು ಉದ್ದ 98.70 ಕಿ.ಮಿ. ಉದ್ದ ಹೊಂದಿರುತ್ತವೆ. ಹಳ್ಳಿ ರಸ್ತೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತವೆ.

3. ಇದು ಪರಿಶೀಲನೆಯಲ್ಲಿದೆ.

ಬೀದರ್‌ಗೆ ಪ್ರತ್ಯೇಕ ಹಾಲು ಉತ್ಪಾದಕರ ಒಕ್ಕೂಟ ಸ್ಥಾಪಿಸುವುದು.

2242 (2788) ಶ್ರೀ ಎಂ.ಜಿ. ಮುಳೆ (ಬಸವಕಲ್ಯಾಣ) :— ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೀದರ್ ಜಿಲ್ಲೆಯಲ್ಲಿ ಹಾಲಿನ ಉತ್ಪಾದನೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೂ ಹಾಲು ಉತ್ಪಾದನೆಯ ಪ್ರಮಾಣವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಬೀದರ್ ಹಾಗೂ ಗುಲ್ಬರ್ಗಾಕ್ಕೆ ಹಾಲು ಉತ್ಪಾದಕರ ಒಕ್ಕೂಟ ಒಂದೇ ಆಗಿರುವುದರಿಂದ ಬೀದರ್ ಜಿಲ್ಲೆಯ ಹಾಲು ಉತ್ಪಾದಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ? ಬೀದರ್‌ಗೆ ಪ್ರತ್ಯೇಕ ಹಾಲು ಉತ್ಪಾದಕರ ಒಕ್ಕೂಟ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೆ? ಹಾಗಿದ್ದರೆ ಎಂದಿನಿಂದ ಸ್ಥಾಪಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :—

ಅ) ಹೌದು.

ಗುಲ್ಬರ್ಗಾ ಹಾಲು ಒಕ್ಕೂಟ 1999-2000 ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ ತಾಲ್ಲೂಕುವಾರು ಹಾಲು ಉತ್ಪಾದನೆ ಈ ಕೆಳಕಂಡಂತೆ ಇರುತ್ತದೆ.

ತಾಲ್ಲೂಕು	ದಿನವಹಿ ಹಾಲಿನ ಉತ್ಪಾದನೆ ಪ್ರಮಾಣ (ಲೀಟರ್‌ನಲ್ಲಿ)
ಹುಮನಾಬಾದ್	30,657
ಭಾಲ್ಕಿ	51,344
ಬಸವಕಲ್ಯಾಣ	31,533
ಬೀದರ್	41,587
ಔರಾದ್	65,050

ಆ) ಬೀದರ್ ಜಿಲ್ಲೆಯ ಹಾಲು ಉತ್ಪಾದಕರಿಗೆ ತೊಂದರೆಯಾಗಿರುವುದು ಗಮನಕ್ಕೆ ಬಂದಿರುವುದಿಲ್ಲ.

ಇಲ್ಲ.

ಉದ್ಭವಿಸುವುದಿಲ್ಲ